INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,46-52
Peer Reviewed Journal, Referred Journal

# ಚರಿತ್ರಕಾರನಾಗಿ ಹುಲ್ಲೂರು ಶ್ರೀನಿವಾಸ ಜೋಯಿಸರು

**ಮಾರುತಿ. ಹೆಚ್.**[1]

ಹುಲ್ಲೂರು ಶ್ರೀನಿವಾಸ ಜೋಯಿಸರು ಮೂಲತಃ ಕೊಟ್ಟೂರು ಸಮೀಪದ ಅಂಬಳಿ ಎಂಬ ಗ್ರಾಮದಲ್ಲಿ ಕಲ್ಲೇಶ್ವರ ದೇವಸ್ಥಾನದ ಅರ್ಚಕ ವೃತ್ತಿಯಲ್ಲಿದ್ದರು. ಇತಿಹಾಸ ವಿಷಯದಲ್ಲಿ ಅತೀವ ಆಸಕ್ತಿ ಹೊಂದಿದವರಾಗಿದ್ದರು. ಚಿತ್ರದುರ್ಗ ಪ್ರವೇಶದ ಇತಿಹಾಸ ಪ್ರಸ್ತಾಪ ಬಂದಾಗ ಯಾರಿಗಾದರೂ ಥಟ್ಟನೇ ನೆನಪಿಗೆ ಬರುವ ಹೆಸರು ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಅವರು ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದಿರುವವರಾದರೂ, ಚಿತ್ರದುರ್ಗ ಇತಿಹಾಸಕ್ಕೆ ಅವರು ಸಲ್ಲಿಸಿರುವ ಕೊಡುಗೆ ಬಹುದೊಡ್ಡದು. ಆದುದರಿಂದಲೇ ಚಿತ್ರದುರ್ಗದ ಇತಿಹಾಸವೆಂದರೆ ಜೋಯಿಸರು, ಜೋಯಿಸರೆಂದರೆ ಚಿತ್ರದುರ್ಗ ಇತಿಹಾಸ[1]ಎನ್ನುವಷ್ಟರ ಮಟ್ಟಿಗೆ ಅವರ ಹೆಸರು ಚಿತ್ರದುರ್ಗದೊಂದಿಗೆ ಬೆಸೆದುಕೊಂಡಿದೆ.ತಮ್ಮ ಪ್ರಶಂಸನೀಯ ಸಾಧನೆಯಿಂದ ಮುಕ್ತ ಪರಿಶುದ್ಧ  ಜೀವನದಿಂದ ಅವರು ಕೇವಲ ಚಿತ್ರದುರ್ಗವಷ್ಟೇ ಅಲ್ಲ.ಇಡಿ ಕರ್ನಾಟಕದಲ್ಲಿ ಹೆಮ್ಮೆಪಡುವಂತಹ ಮಹನೀಯರಲ್ಲೊಬ್ಬರಾಗಿದ್ದಾರೆ.

**ಬಾಲ್ಯಜೀವನ** :

ಹುಲ್ಲೂರು ಶ್ರೀನಿವಾಸ ಜೋಯಿಸರು 1892 ಮಾರ್ಚ್ 29 ರಂದು ಪಾಂಡುರಂಗ ಜೋಯಿಸರು ಮತ್ತು ಪಾರ್ವತಮ್ಮ ದಂಪತಿಯ ದ್ವಿತೀಯ ಪುತ್ರನಾಗಿ ಜನಿಸಿದರು. ಇವರ ಪೂರ್ವಿಕರು ಸುಮಾರು 300 ವರ್ಷಗಳ ಹಿಂದೆ ಚಿತ್ರದುರ್ಗ ಸಮೀಪದ ಹುಲ್ಲೂರು ಗ್ರಾಮಕ್ಕೆ ಬಂದು ನೆಲೆಸಿದರು. ಪಾಂಡುರಂಗ ಜೋಯಿಸರು ಮಗನಿಗೆ ಉತ್ತಮ ಶಿಕ್ಷಣವನ್ನು ಕಲಿಯಲು ಪ್ರೋತ್ಸಾಹ ನೀಡಿದರು. ಶ್ರೀನಿವಾಸ ಜೋಯಿಸರು ಮುಂದೆ ಮೆಟ್ರಿಕ್ಯುಲೇಷನ್ ವರೆಗೆ ಚಿತ್ರದುರ್ಗದಲ್ಲಿಯೇ ಓದಿದ ಜೋಯಿಸರು ಆ ಪರೀಕ್ಷೆಯನ್ನು ಪಾಸು ಮಾಡಿ ಸರ್ಕಾರಿ ನೌಕರಿಗೆ ಸೇರಿದರು. 2-3 ವರ್ಷ ಗುಮಾಸ್ತರಾಗಿ ನಂತರ ಅದನ್ನು ಬಿಟ್ಟು ಶಾಲಾ ಉಪಾಧ್ಯಾಯರಾಗಿ ಒಂದೆರಡು ವರ್ಷ ಕೆಲಸ

1.ಸಂಶೋಧನಾ ವಿದ್ಯಾರ್ಥಿ,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ಮಾಡಿದರು. ಉಪಾಧ್ಯಾಯ ವೃತ್ತಿಯಲ್ಲಿರುವಾಗಲೇ ಆಗಿನ ಮೈಸೂರು ಸರ್ಕಾರ ನಡೆಸುತ್ತಿದ್ದ ಪ್ಲೀಡರ್ ಪರೀಕ್ಷೆಯನ್ನು ತೆಗೆದುಕೊಂಡು ಪಾಸು ಮಾಡಿದರು. ಆಗಿನ ಕಾಲಕ್ಕೆ ವಕೀಲರಾಗಲು ಎಲ್.ಎಲ್.ಬಿ. ಅಥವಾ ಬಿ.ಎಲ್. ಕೋರ್ಸ್‌ಗಳನ್ನು ಮಾಡಬೇಕೆಂದೇನೂ ಇರಲಿಲ್ಲ. ಪ್ಲೀಡರ್ ಪರೀಕ್ಷೆ ಅಷ್ಟೇ ಸಾಕಾಗಿತ್ತು. ಹೀಗಾಗಿ ಹುಲ್ಲೂರು ಶ್ರೀನಿವಾಸ ಜೋಯಿಸರು ಉಪಾಧ್ಯಾಯ ವೃತ್ತಿಗೆ ಶರಣು ಹೊಡೆದು ಸ್ವತಂತ್ರವಾದ ವಕೀಲ ವೃತ್ತಿಯನ್ನು ಕೈಗೊಂಡರು. ಅಲ್ಲಿಂದ ಮುಂದೆ ಅವರು ತಮ್ಮ ವೃತ್ತಿಯ ದಾರಿಯನ್ನು ಬದಲಾಯಿಸಲಿಲ್ಲ. ಜೋಯಿಸರ ಪೂರ್ವಿಕರು ಹುಲ್ಲೂರಿನವರಾಗಿದ್ದರಿಂದ ಇವರಿಗೆ ಚಿತ್ರದುರ್ಗದಷ್ಟೇ ಅಭಿಮಾನ ಹುಲ್ಲೂರಿನ ಮೇಲೂ ಇತ್ತು. ಇವರು ಹುಲ್ಲೂರಿನಲ್ಲಿ ಗ್ರಾಮ ಸೇವೆಯನ್ನು ಸಂಶೋಧನೆಯನ್ನು ಮೊದಲು ಮಾಡಿದ್ದರಿಂದ ಇವರು ಹುಲ್ಲೂರು ಶ್ರೀನಿವಾಸ ಜೋಯಿಸರು ಎಂದು ಹೆಸರಾದರು[2].

**ಸ್ವಾತಂತ್ರ್ಯ ಚಳುವಳ ಮತ್ತು ಮೈಸೂರು ಚಲೋ ಚಳುವಳಿಯಲ್ಲಿ ಶ್ರೀನಿವಾಸ ಜೋಯಿಸರು :**

ಚಿತ್ರದುರ್ಗದಲ್ಲಿ ವಕೀಲರಾದ ಸಿ. ಚನ್ನಕೇಶವಯ್ಯ, ಹೆಚ್.ಜಿ. ಕೃಷ್ಣರಾವ್, ಕಡ್ಲೆಬಾಳ್ ಭೀಮರಾವ್, ಎಸ್. ವೀರಬಸಪ್ಪ, ಟಿ.ಎನ್. ರಂಗಸ್ವಾಮಿ ಮುಂತಾದ ವಕೀಲರು ಹೆಸರಾಗಿದ್ದರು ಅವರಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು ಒಬ್ಬರು. ಆ ಮಧ್ಯೆ ಇಡೀ ದೇಶದಲ್ಲಿ ಉಕ್ಕಿ ಹರಿಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಪ್ರವಾಹ ಅವರನ್ನು ಸೆಳೆಯಿತು. ಗಾಂಧೀಜಿಯವರ ವಿಚಾರಧಾರೆಗೆ ಮನಸೋತ ಜೋಯಿಸರು ಗಾಂಧೀಜಿಯವರು ಅನುಯಾಯಿಯಾದರು. ಖಾದಿಧಾರಿಯಾಗಿ ಕಾಂಗ್ರೆಸ್ ಸದಸ್ಯರಾದರು. ಸ್ವದೇಶಿ ವಸ್ತುಗಳನ್ನು ಬಳಸುವ ವೃತ್ತ ತೊಟ್ಟರು. ಸ್ವದೇಶಿ ಮತ್ತು ಖಾದಿ ಪ್ರಚಾರ ಕೈಗೊಂಡರು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಎರಡು ಭಾರಿ ಜೈಲುವಾಸ ಅನುಭವಿಸಿದರು. 1939 ರಲ್ಲಿ ಅರಣ್ಯ ಸತ್ಯಾಗ್ರಹ ಚಿತ್ರದುರ್ಗದಲ್ಲಿ ನಡೆಯಿತು. ಆಗ ಜೋಯಿಸರಿಗೆ ಅದರಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಆಗಲಿಲ್ಲ. ಆದರೆ 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಕಾಲಕ್ಕೆ ಚಿತ್ರದುರ್ಗದಲ್ಲಿ ಕಾಂಗ್ರೆಸ್ ಕಛೇರಿಯ ಮೇಲೆ ಸರ್ಕಾರದ ನಿಷೇದಾಜ್ಞೆಯನ್ನು ಉಲ್ಲಂಘಿಸಿ ರಾಷ್ಟ್ರಧ್ವಜವನ್ನು ಹಾರಿಸಿ ಧ್ವಜ ಸತ್ಯಾಗ್ರಹವನ್ನು ನಡೆಸಿದರು[3]. ಆ ಕಾರಣಕ್ಕೆ ದಸ್ತಗಿರಿಯಲ್ಲಿ ಅವರು ಸುಮಾರು ಒಂದೂವರೆ ವರ್ಷಕಾಲ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇರಬೇಕಾಯಿತು. 2ನೇ ಮಹಾಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿಯೂ ಜೋಯಿಸರು ದಸ್ತಗಿರಿಯಾಗಿ ಜೈಲು ಸೇರಬೇಕಾಗಿ ಬಂದಾಗ ಮನೆಯಲ್ಲಿದ್ದವರಿಗೆ ಯಾವ ವ್ಯವಸ್ಥೆಯೂ ಇಲ್ಲದ ದಾರುಣ ಸ್ಥಿತಿ ಅಂಥ ಪರಿಸ್ಥಿತಿಯಲ್ಲೂ ಜೋಯಿಸರು ನಿಶ್ಚಲ ಮನಸ್ಸಿನಿಂದ ದೇಶಪ್ರೇಮವನ್ನು ಮೆರೆದರು.

ಜೈಲಿನಲ್ಲಿದ್ದ ಅವಧಿಯಲ್ಲಿ ಒಮ್ಮೆ ಅವರು ಖಾಯಿಲೆಗೆ ತುತ್ತಾದರು. ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಜೊತೆಯಲ್ಲಿ ಜೈಲುವಾಸಿಗಳಾಗಿದ್ದ ಆಪ್ತಮಿತ್ರ ಸಿದ್ದಪ್ಪನಹಳ್ಳಿ

ನಿಜಲಿಂಗಪ್ಪನವರು, ಇತರ ಕೆಲವರು ಅಲ್ಲದೇ ಜೈಲಿನ ಅಧಿಕಾರಿಗಳೂ ಸಹ ನೀವು ಏನಾದರೂ ವಿವರಣೆ ಬರೆದುಕೊಟ್ಟು ಜೈಲಿನಿಂದ ಹೊರಗೆ ಹೋಗಿ, ಚಿಕಿತ್ಸೆ ಮಾಡಿಸಿಕೊಳ್ಳಿ ಎಂದು ಹೇಳಿದರು. ಆದರೆ ಜೋಯಿಸರು ಅದಕ್ಕೆ ಒಪ್ಪಲಿಲ್ಲ. ನಾನು ಹಾಗೆ ಜೈಲಿನಿಂದ ಹೊರಗೆ ಹೋಗುವುದಿಲ್ಲ. ಸತ್ತರೆ ಇಲ್ಲಿಯೇ ಸಾಯುತ್ತೇನೆ ಎಂದು ಹೇಳಿ ಅಲ್ಲಿಯೇ ಉಳಿದರು. ಜೋಯಿಸರು ಖಾದಿಧಾರಿಗಳಾಗಿ ಖಾದಿ ಪ್ರಚಾರವನ್ನು ಕೈಗೊಂಡರೆಂದು ಹಿಂದೆಯೇ ಹೇಳಲಾಯಿತಷ್ಟೇ ಆದರೂ ಸ್ವತಃ ಚಿತ್ರದುರ್ಗದ ಅಯ್ಯಣ್ಣನ ಪೇಟೆಯಲ್ಲಿದ್ದ ತಮ್ಮ ಪೂರ್ವಿಕರ ಮನೆಯಲ್ಲೇ ಖಾದಿ ಮಳಿಗೆಯೊಂದನ್ನು ತೆರೆದು ಖಾದಿ ಮಾರಾಟಕ್ಕೆ ವ್ಯವಸ್ಥೆಯನ್ನು ಕಲ್ಪಿಸಿದರು[3]. ಕೊನೆಯವರೆಗೂ ಅವರು ಖಾದಿಯನ್ನು ಧರಿಸುತ್ತಿದ್ದರು. 1947 ಆಗಸ್ಟ್ 15ಕ್ಕೆ ನಮ್ಮ ದೇಶ ಸ್ವಾತಂತ್ರ್ಯ ಬಂದಿತಷ್ಟೆ. ಆಗ ಭಾರತ ಒಪ್ಪಿಕೊಂಡಿದ್ದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಗಿನ ಮೈಸೂರಿನ ಸಂಸ್ಥಾನದ ಒಡೆಯರ್ ಪ್ರಭುತ್ವ ಇನ್ನೂ ಒಪ್ಪಿಕೊಂಡಿರಲಿಲ್ಲ. ಆ ನಿಲುವಿನ ವಿರುದ್ಧ ಅದೇ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ "ಮೈಸೂರು ಚ'ಲೋ" ಎಂಬ ಮತ್ತೊಂದು ಚಳುವಳಿ ರೂಪಗೊಂಡಿತು. ಜೋಯಿಸರೂ ಸಹ ಈ ಚಳುವಳಿಯಲ್ಲಿ ಪಾಲ್ಗೊಂಡರು. ಚಳುವಳಿ ತೀವ್ರ ಸ್ವರೂಪ ತಳೆದಾಗ ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳುವ ಮುಂಚಿತವಾಗಿಯೇ ಕೆಲವರನ್ನು ಬಂಧಿಸಿ ಸೆರೆಯಲ್ಲಿಡಲಾಯಿತು. ಬಂಧಿತರಲ್ಲಿ ಜೋಯಿಸರೂ ಒಬ್ಬರು. ಹೀಗೆ ಅವರು ಮತ್ತೆ ಕೆಲಸು ತಿಂಗಳು ಬೆಂಗಳೂರಿನ ಅದೇ ಸೆಂಟ್ರಲ್ ಜೈಲಿನಲ್ಲಿ ಕಳೆಯಬೇಕಾಯಿತು.

ಇದಾದ ನಂತರದಲ್ಲಿ ಮೈಸೂರು ಸಂಸ್ಥಾನದ ಸರ್ಕಾರ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡು ಘೋಷಣೆ ಹೊರಡಿಸಿದ್ದರು. ಇದೆಲ್ಲಾ ಆಗುವವರೆಗೆ ಬಂಧನದಲ್ಲಿದ್ದ ಜೋಯಿಸರು ಬಿಡುಗಡೆಯಾದರು. ನಂತರ ಗಾಂಧೀಜಿಯವರು ನಿಧನರಾದ ಕಾಲಕ್ಕೆ ಅವರ ಚಿತಾಭಸ್ಮವನ್ನು ರಾಜ್ಯಕ್ಕೆ ತಂದಾಗ, ಅದರ ಒಂದು ಭಾಗವನ್ನು ಚಿತ್ರದುರ್ಗಕ್ಕೆ ತಂದು ಮುಂದಕ್ಕೆ ಅದನ್ನು ಹರಿಹರದ ಬಳಿ ತುಂಗಾಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು. ಈ ಕಾರ್ಯದಲ್ಲಿಯೂ ಸಹ ಜೋಯಿಸರು ಉತ್ಸಾಹದಿಂದ ಪಾಲ್ಗೊಂಡರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಮ್ಮ ನಾಡಿನಲ್ಲಿ ನಡೆದ ಮತ್ತೊಂದು ಪ್ರಮುಖ ಚಳುವಳಿ ಎಂದರೆ "ಕರ್ನಾಟಕ ಏಕೀಕರಣ ಚಳುವಳಿ" ಇದರಲ್ಲಿಯೂ ಸಹ ಅವರು ಕ್ರಿಯಾಶೀಲರಾಗಿ ಭಾಗವಹಿಸಿದ್ದರು. ಆದವಾನಿ, ಆಲೂರು, ಮಡಕಶಿರಾ, ಅನಂತಪುರ ಮುಂತಾದ ಪ್ರದೇಶಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳಾಗಿದ್ದರಿಂದ ಅವೆಲ್ಲಾ ಕರ್ನಾಟಕಕ್ಕೆ ಸೇರಲೇಬೇಕೆಂಬುದು ಜೋಯಿಸರ ಆಶಯವಾಗಿತ್ತು[3]. ಅದರಂತೆಯೇ ಮೈಸೂರು ಪ್ರಾಂತ್ಯ ರಚನೆಯಾದಾಗ ಜೋಯಿಸರು ಹಾಸಿಗೆ ಹಿಡಿದಿದ್ದರು. ಅವರನ್ನು ನೋಡಲೆಂದು ಬಂದಿದ್ದ ಮಿತ್ರರೂ ಮುಖ್ಯಮಂತ್ರಿಯಾದ ಎಸ್. ನಿಜಲಿಂಗಪ್ಪನವರಿಂದ ಆ ಸುದ್ದಿ ತಿಳಿದು ತುಂಬಾ ಸಂತೋಷಪಟ್ಟರು. ಹೀಗೆ ಜೋಯಿಸರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು.

**ಇತಿಹಾಸಕ್ಕೆ ಹುಲ್ಲೂರು ಶ್ರೀನಿವಾಸ ಜೋಯಿಸರು ನೀಡಿದ ಕೊಡುಗೆ** : ಜೋಯಿಸರು ಚಿತ್ರದುರ್ಗ ಹಾಗೂ ಕರ್ನಾಟಕ ಇತಿಹಾಸದತ್ತ ಬಹಳ ಆಕರ್ಷಿತರಾಗಿದ್ದರು. ಚಿತ್ರದುರ್ಗ ಇತಿಹಾಸದ ಅಧ್ಯಯನ ಕೈಗೊಳ್ಳಲು ಅವರಿಗೆ ಸ್ಪೂರ್ತಿ ನೀಡಿದ್ದು ಚಿತ್ರದುರ್ಗದವರೇ ಆದ ಡಾ. ಪಿ. ಕೃಷ್ಣರಾವ್ ಎಂಬುವವರು ವಿದ್ಯಾರ್ಥಿಯಾಗಿದ್ದಾಗಲೇ "ಪ್ರಬುದ್ಧ ಕರ್ನಾಟಕ" ಪತ್ರಿಕೆ 1919ರಲ್ಲಿ ಪ್ರಕಟಿಸಿದ ಚಿತ್ರದುರ್ಗದ ಬೆಟ್ಟ ಮತ್ತು 1921ರಲ್ಲಿ ಪ್ರಕಟಿಸಿದ ನಾಯಕ ಸಾಮ್ರಾಜ್ಯ ಎಂಬ ಲೇಖನಗಳನ್ನು ಬರೆದಿದ್ದರು. ಶೈಶವದಲ್ಲಿ ತಾಯಿ ಪಾರ್ವತಮ್ಮ ತುಂಬ ಪ್ರೀತಿಯಿಂದ ಸಾಹಿತ್ಯ ಇತಿಹಾಸಗಳ ಬಗ್ಗೆ ಅಭಿರುಚಿ ಅಂಕುರಿಸಲ್ಪಟ್ಟು ಬಾಲ್ಯದಲ್ಲಿ ದುರ್ಗದ ಕೋಟೆ, ಕಾಡು ಗುಡ್ಡಬಂಡೆಗಳನ್ನು ಸುತ್ತುತ್ತು ಮತ್ತು ಇಲ್ಲಿಯ ಶೂರ ಧೀರ ಪಾಳೆಯಗಾರರ ವೃತ್ತಾಂತಗಳನ್ನು ಕೇಳುತ್ತಾ ಬೆಳೆದಿದ್ದ ಜೋಯಿಸರು ಇತಿಹಾಸದತ್ತ ಸೆಳೆಯಲ್ಪಟ್ಟಿದ್ದು ಸಹಜವೇ ಆಗಿತ್ತು. ಜೊತೆಗೆ ಸ್ವಾತಂತ್ರ್ಯ ಆಂದೋಲನ ಹಾಗೂ ಸ್ವದೇಶಾಭಿಮಾನಗಳ ಪ್ರಧಾನವೂ ಸಹ ಅವರು ಒಬ್ಬ ಸಂಶೋಧಕರಾಗಿ, ಲೇಖಕರಾಗಿ ಬೆಳೆಯಲು ಪೂರಕವಾಯಿತೆಂದು ಹೇಳಬಹುದು.

ಚಿತ್ರದುರ್ಗದ ಬೆಟ್ಟಕೋಟೆ ಅಷ್ಟೇ ಅಲ್ಲದೇ ಊರುಗಳನ್ನು ಸುತ್ತುವುದು, ಅಲ್ಲಿಯ ಪ್ರಾಜ್ಯ ವಸ್ತುಗಳನ್ನು ವೀಕ್ಷಿಸುವುದು ಸ್ಥಳೀಯ ಹಿರಿಯರ ಮೂಲಕ ಮತ್ತು ತಮ್ಮಲ್ಲಿಗೆ ಬರುತ್ತಿದ್ದ ಕಕ್ಷಿದಾರರ ಮೂಲಕ ಅನೇಕ ಸ್ಥಳಗಳ ವಿವರಗಳನ್ನು ಅನೇಕರಲ್ಲಿದ್ದ ತಾಳೆಗರಿ ಕಾಗದದ ಹಸ್ತಪ್ರತಿಗಳು, ಪತ್ರದಾಖಲೆಗಳು ಮುಂತಾದ ಆಕರಗಳನ್ನು ಸಂಗ್ರಹಿಸುವುದು, ಭಾಷಣಕ್ಕೆಂದು ಬೇರೆ ಬೇರೆಯ ಊರುಗಳಿಗೆ ಹೋದಾಗಲೂ ಆಯಾ ಸ್ಥಳಗಳ ಐತಿಹಾಸಿಕ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಅವುಗಳ ಅಧ್ಯಯನ ಕೈಗೊಂಡು ಲೇಖನಗಳನ್ನು ಬರೆಯುವುದು, ಅವರ ಅಭ್ಯಾಸವಾಗಿತ್ತು 1922 ರಿಂದ 1956ರವರೆಗೆ ಅವರು ಚಿತ್ರದುರ್ಗ ಹಾಗೂ ಕರ್ನಾಟಕ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಸುಮಾರು ಇನ್ನೂರು ಲೇಖನಗಳನ್ನು ಹಾಗೂ ಹತ್ತು ಪುಸ್ತಕಗಳನ್ನು ಬರೆದರು[4].

ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾಸಕ್ತಿ, ಅಧ್ಯಯನ ಲೇಖನಗಳ ವ್ಯಾಪ್ತಿ ವಿಸ್ತಾರವಾದದ್ದು, ವೈವಿಧ್ಯಮಯವಾದದ್ದು ಕನ್ನಡ ನಾಡಿನ ವಿವರವನ್ನು ವೀರ ಮಹಿಳೆಯರನ್ನು ಕುರಿತು ಅವರು ಅನೇಕ ಲೇಖನಗಳನ್ನು ಪುಸ್ತಕವಗಳನ್ನು ಬರೆದಿದ್ದಾರೆ[5]. ಗಂಡುಗಲಿ ಕುಮಾರರಾಮ, ಕನ್ನಡ ಕಲಿ ಸಿರುಮನ ಚರಿತ್ರೆ ಇವು ಗಂಭೀರ ಶೈಲಿಯ ಪುಸ್ತಕಗಳಾದರೆ, ಮಯೂರಶರ್ಮ ಮತ್ತು ಇತರ ಕಥೆಗಳು, ನಾಡಕಥೆಗಳು, ಹುಲಿಯೂ ಮಾರಭೂಪಾಲ, ಸಳ, ಕಪೋತವಾಕ್ಯ, ಜನಪ್ರಿಯ ಕಥನ ರೂಪದ ಪುಸ್ತಕಗಳಾಗಿವೆ. ಹೊಯ್ಸಳಾನ್ವಯ ಪ್ರತಾಪ, ಹೊಯ್ಸಳ ವಿನಯಾದಿತ್ಯ, ಬಾಚಣ್ಣದಣ್ಣಾಯಕ, ಉಚ್ಚಂಗಿ ಗಿರಿನಾಥ, ಸಿಡಿದೆಲೆಯ ಹೊನ್ನಿ, ಬಾಬಮ್ಮ, ವೀರಮಲ್ಲಮ್ಮ, ವೀರರಮಣಿ ಓಬವ್ವ ಮುಂತಾದುವು ಜನಪ್ರಿಯ ಲೇಖನಗಳಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ "ಬೌದ್ಧಧರ್ಮದ ಕುರುಹುಗಳು" ಜೈಮಿನಿ ಭಾರತದಲ್ಲಿ ಚಾರಿತ್ರಿಕ ಕಾಲದ ವಿಷಯಗಳು ಕದಂಬರ ಮಯೂರಶರ್ಮನು ಚಂದ್ರಹಾಸನೇ? 'ರಾಮಗಿರಿಯಾಶ್ರಮ' ಶ್ರವಣಬೆಳಗೊಳಕ್ಕೆ ಬಂದ ಚಂದ್ರಗುಪ್ತನು ಯಾರು? "ಬಿಜ್ಜಗ ಶಿರಚ್ಛೇದಕ", ಗೊಮ್ಮಟೇಶ್ವರ ಪ್ರತಿಷ್ಟಾಪನೆಯ ಕಾಲ, ಬಾಸ ಒಂದು ಒಗಟು, ಶ್ರೀ ಶಂಕರಾಚಾರ್ಯರ ಕಾಲನಿರ್ಣಯ, ಮಂತ್ರಾಲಯ ಐತಿಹಾಸಿಕ ವಿವೇಚನೆ, ಚಿನ್ಮೂಲಾದ್ರಿಯ ವೀರಶೈವಧರ್ಮ ಕ್ರಾಂತಿ ಪುರಷರು ಇವೆ. ಮುಂತಾದ ಲೇಖನಗಳು ಅವರ ಸಂಶೋಧನಾಸಕ್ತಿಯ ಹರಹನ್ನು ತೋರಿಸುತ್ತವೆ. ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ, ಮತ್ತು ಚಿತ್ರದುರ್ಗ ಪಾಳೆಯಗಾರರ ಇತಿಹಾಸ ಕುರಿತಂತೆ ಜೋಯಿಸರು ಮಾಡಿರುವ ಸಂಶೋಧನೆ ಮತ್ತು ಬರೆದಿರುವ ಲೇಖನಗಳು ಉಲ್ಲೇಖನೀಯವಾದವು.

ಎಂ.ಎಸ್. ಪುಟ್ಟಣ್ಣನವರು ಕೆಲವು ಆಕರಗಳನ್ನು ಆಧರಿಸಿ ಚಿತ್ರದುರ್ಗದ ಪಾಳೆಯಗಾರರು ಎಂಬ ಪುಸ್ತಕವನ್ನು 1924ರಲ್ಲಿ ಹೊರತರುವುದಕ್ಕೆ ಮೊದಲೇ 1922 ರಷ್ಟು ಹಿಂದೆಯೇ ಚಿತ್ರದುರ್ಗ ಇತಿಹಾಸ ರಚನೆಗೆ ತೊಡಗಿದವರು ಜೋಯಿಸರು ಎನ್ನುವುದು ಗಮನಿಸಬೇಕಾದ ಸಂಗತಿ, "ಚಿತ್ರದುರ್ಗದ ಬಖೈರು" ಎಂಬುದು ಅವರ ಸಂಪಾದಿಸಿರುವ ಚಿತ್ರದುರ್ಗದ ಕೊನೆಯ ಪಾಳೆಯಗಾರ ಮದಕರಿನಾಯಕನ ಇತಿಹಾಸ ಕುರಿತ ಒಂದು ಪ್ರಮುಖ ಆಕರ ಕೃತಿಯಾಗಿದೆ.

"ಭರಮಣ್ಣನಾಯಕನ ಸಮರ ವಿಜಯ" ಹಿರೇ ಮದಕರಿನಾಯಕನ ತಾರಾವಳಿ, ಮದಕರಿರಾಜೇಂದ್ರ ದಂಡಕ, ಮುಂತಾದ ಚಿತ್ರದುರ್ಗದ ಪಾಳೆಯಗಾರರ ಇತಿಹಾಸಕ್ಕೆ ನೆರವಾಗುವ ಕವಿಕೃತಿಗಳನ್ನು ಕೆಲವು ಜಾನಪದ ಗೀತೆಗಳನ್ನು ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಮಠಗಳ ಸಲಿನಲ್ಲಿ ಬರುವ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ಹಾಗೂ ಸಿರಿಗೆರೆಯ ತರಳಬಾಳು ಬೃಹನ್ಮಠ ಇವುಗಳ ಇತಿಹಾಸ ಇವುಗಳಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳು ಇತ್ಯಾದಿಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಚಿತ್ರದುರ್ಗ ಪಾಳೆಯಗಾರರಿಗೆ ಸಂಬಂಧಿಸಿದ ಅನೇಕ ಕಾಗದ ಪತ್ರಗಳನ್ನು ಹಸ್ತಪ್ರತಿ ದಾಖಲೆಗಳನ್ನು ಅಭ್ಯಸಿಸಿ ಅನೇಕ ಲೇಖನಗಳನ್ನು ಬರೆದಿದ್ದಾರೆ[5].

ಐತಿಹಾಸಿಕ ಪತ್ರ ವ್ಯವಹಾರಗಳು, ಚಿತ್ರದುರ್ಗದ ಪತನದ ನಂತರ, ಮಾಯಕೊಂಡದ ಮುತ್ತಿಗೆ, ರಸಸಿದ್ಧರು, ಚಿತ್ರದುರ್ಗದ ಏಳು ಸುತ್ತಿನ ಕೋಟೆ ಮುಂತಾದ ಲೇಖನಗಳನ್ನು ಇಲ್ಲಿ ಹೆಸರಿಸಬಹುದು. ಈಲ್ಲೆ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ಒಂದಾದ ಹರಿಹರವನ್ನು ಕುರಿತ ಅವರ ವಿಸ್ತಾರವಾದ ಅಧ್ಯಯನ ಕೃತಿಯಿಂದ ಇನ್ನೂ ಅಪ್ರಕಟಿತ ಸ್ಥಿತಿಯಲ್ಲೇ ಉಳಿದಿದೆ[6].

ಪ್ರಾದೇಶಿಕ ಇತಿಹಾಸಕ್ಕಾಗಿ ಶ್ರಮಿಸಿದ ಕಪಟರಾಳ ಕೃಷ್ಣರಾವ್ ಸುರಪುರದ ಇತಿಹಾಸ, ಚಿಕ್ಕೆರೂರು ಗೋವಿಂದಾಚಾರ್ಯ – ಹರಪನಹಳ್ಳಿ ಇತಿಹಾಸ, ಕೆ. ನಾರಾಯಣಚಾರ್ಯ, ಮಧುಗಿರಿ

ಇತಿಹಾಸ, ನಾ.ಬಾ. ಶಾಸ್ತ್ರಿ, ಕೊಪ್ಪಳದ ಇತಿಹಾಸವನ್ನು ಇಂಥ ಕೆಲವೇ ಕೆಲವರ ಸ್ಥಾನದಲ್ಲಿ ಶ್ರೀನಿವಾಸ ಜೋಯಿಸರು ವಿಶಿಷ್ಟ ಸ್ಥಾನದ ಹೊಂದಿದ್ದಾರೆ. ಚಿತ್ರದುರ್ಗದಷ್ಟೇ ಅಲ್ಲದೇ ಕರ್ನಾಟಕವನ್ನು ಆಳಿದ ಅನೇಕ ಪ್ರಮುಖ ರಾಜವಂಶಗಳ ಮತ್ತು ಪ್ರಾದೇಶಿಕ ಅರಸು ಮನೆತನಗಳ ಇತಿಹಾಸದ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದಾರೆ.

ಒಬ್ಬ ವಿಧ್ವಾಂಸರು ಅಭಪ್ರಾಯ ಪಟ್ಟಿರುವಂತೆ ಕದಂಬ, ಚಾಲುಕ್ಯ, ಹೊಯ್ಸಳ, ಗಂಗ, ಪುವ್ವಲ, ವಿಜಯನಗರ, ಮುಂತಾದ ಕನ್ನಡ ನಾಡಿನೊಡೆಯರು, ಜೋಯಿಸರಿಗೆ ತಮ್ಮ ನೆಂಟರಿಗಿಂತಾ ಹೆಚ್ಚು ಪರಿಚಯದವರಾಗಿದ್ದರು ಎಂದು ಹೇಳಿರುವುದು ಸಮಂಜಸವಾಗಿದೆ. ಜೋಯಿಸರ ಇತಿಹಾಸ ಕ್ಷೇತ್ರಕ್ಕೆ ಮಹತ್ಸಾಧನೆಗೆ ಮೆಚ್ಚಿಕೊಂಡ ಸಿರಿಗೆರೆಯ ತರಳಬಾಳು ಜಗದ್ಗುರುಗಳು 1949ರಲ್ಲಿ "ಐತಿಹ್ಯ ವಿಮರ್ಶನ ವಿಚಕ್ಷಣ" ಮತ್ತು "ಇತಿಹಾಸ ಸಂಶೋಧನಾ ಪುಸ್ತಕ", ಎಂಬ ಬಿರುದನ್ನು ಕೊಟ್ಟು ಸತ್ಕರಿಸಿದರು. ಜೋಯಿಸರ ನೂರಾರು ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿರಲಿಲ್ಲ. ಹಾಗಾಗಿ ಅವರ ಬಿಡಿ ಲೇಖನಗಳೆಲ್ಲ. ಒಂದು ಉತ್ತಮವಾದ ಪುಸ್ತಕ ರೂಪದಲ್ಲಿ ಒಂದುಗೂಡುವುದು ಅವಶ್ಯಕ ಎಂದು ಅನೇಕರು ಹಾರೈಸುತ್ತಲೇ ಇದ್ದರು. ಈ ಉದ್ದೇಶ ಸಾಧನೆಗಾಗಿ 1976ರಲ್ಲಿ ಬಿ.ವಿ. ವೈಕುಂಠರಾಜು ಅವರ ಅಧ್ಯಕ್ಷತೆಯಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟನಾ ಸಮಿತಿಯು ರೂಪಗೊಂಡಿತು. ಈ ಸಮಿತಿಯ ಮೊದಲಿಗೆ ಆಯ್ದು ಸಿದ್ಧಪಡಿಸಿದ ಜೋಯಿಸರ 47 ಲೇಖನಗಳು ಸಂಪುಟ "ಹುಲ್ಲೂರು ಶ್ರೀನಿವಾಸ ಜೋಯಿಸರ 47 ಲೇಖನಗಳ ಸಂಪುಟ" ಆ ವರ್ಷವೇ ಪ್ರಕಟವಾಯಿತು[7].

**ಪ್ರಾಚ್ಯವಸ್ತು ಸಂಗ್ರಹಾಲಯ ಸ್ಥಾಪನೆ** :

ಶ್ರೀನಿವಾಸ ಜೋಯಿಸರು ಮಾಡಿದ ಮತ್ತೊಂದು ಮಹತ್ವದ ಕಾರ್ಯವೆಂದರೆ, ಚಿತ್ರದುರ್ಗದಲ್ಲಿ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದು, ಚಿತ್ರದುರ್ಗ ಮತ್ತು ಚಂದ್ರವಳ್ಳಿಯ ಪರಿಸರದಲ್ಲಿಯ ಮತ್ತು ಜಿಲ್ಲೆಯ ಹಲವು ಗ್ರಾಮಗಳಲ್ಲಿ ಅವರು ಸಂಶೋಧನಾ ನಿರತರಾಗಿದ್ದಾಗ ಅನೇಕ ಪ್ರಾಚ್ಯವಸ್ತುತಳನ್ನು ಸಂಗ್ರಹಿಸಿದ್ದರು. ಅವನು ಸಾರ್ವಜನಿಕರೆಲ್ಲರೂ ನೋಡಲು ಅನುಕೂಲವಾಗುವಂತೆ ಪ್ರದರ್ಶನಕ್ಕಿಡುವ ಸೂಕ್ತ ವ್ಯವಸ್ಥೆ ಎಂದರೆ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವುದು ಅಗತ್ಯವೆಂದು ಅವರಿಗೆ ಅನ್ನಿಸಿತು. ಅದಕ್ಕಾಗಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆ ಬಗ್ಗೆ ಅನೇಕ ಗಣ್ಯರಿಗೆ, ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಕಡೆಗೆ 1951 ರಲ್ಲಿ ಅಂದಿನ ಮೈಸೂರು ಸಕಾರ ಚಿತ್ರದುರ್ಗದ ಕೋಟೆ ರಂಗಯ್ಯನ ಬಾಗಿಲಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಲು ಕ್ರಮಕೈಗೊಂಡರು[8].

1952 ರಲ್ಲಿ ಈ ವಸ್ತು ಸಂಗ್ರಹಾಲಯದ ಸ್ಥಾಪನೆಯ ಬಗ್ಗೆ ಸರ್ಕಾರದಿಂದ ಅಧಿಕೃತ ಆಜ್ಞೆ ಹೊರಡಿಸಲ್ಪಟ್ಟು ಅದೇ ವರ್ಷ ಆಗಿನ ರಾಜಪ್ರಮುಖರಾಗಿದ್ದು ಜಯಚಾಮರಾಜ ಒಡೆಯರು ವಿದ್ಯುಕ್ತವಾಗಿ ಈ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಉದ್ಘಾಟಿಸಿದರು. ಸರ್ಕಾರ ಅದಕ್ಕೆ ಗೌರವ ಕ್ಯುರೇಟರ್ ಆಗಿ ಜೋಯಿಸರನ್ನೇ ನೇಮಿಸಿತು. ಸ್ಥಾಪನೆಯಾದಾಗಿನಿಂದ 1956ರವರೆಗೆ ಆರು ವರ್ಷಗಳ ಕಾಲ; ಅವರು ಅದರ ಗೌರವ ಕ್ಯುರೇಟರ್ ಆಗಿ ಸೇವೆ ಸಲ್ಲಿಸಿದರು. ಈ ವಸ್ತು ಸಂಗ್ರಹಾಲಯದಲ್ಲಿ ಶಿಲಾಯುಗ ಮತ್ತು ಶಾತವಾಹನ ಕಾಲದಿಂದ ಹಿಡಿದು ಚಿತ್ರದುರ್ಗದ ಪಾಳೆಯಗಾರರ ಕಾಲದವರೆಗಿನ ಅನೇಕ ಪ್ರಾಚ್ಯ ವಸ್ತುಗಳ ಸಂಗ್ರಹವಿದೆ.

ಅನೇಕ ಶಿಲಾಯುಧಗಳ ವಿಗ್ರಹಗಳು, ಶಿಲಾ ಹಾಗೂ ತಾಮ್ರ ಶಾಸನಗಳು, ನಾಣ್ಯಗಳು, ಮಣಿಗಳು, ತಾಳೇಗರಿ ಹಾಗೂ ಕಾಗದದ ಹಸ್ತಪ್ರತಿಗಳು, ಶಿಲ್ಪ ಪಟ್ಟಿಕೆಗಳು, ಚಿತ್ರಗಳು, ಕತ್ತಿ, ಕವಚ, ಭರ್ಜಿ, ಗುರಾಣಿ, ಶಿರಸ್ತ್ರಾಣಗಳು, ಫಿರಂಗಿ, ಗುಂಡುಗಳು ಹೀಗೆ ಹಲವು ಬಗೆಯ ಪ್ರಾಚ್ಯವಸ್ತುಗಳ ಸಂಗ್ರಹವಿದ್ದ ಈಗಲೂ ಅದನ್ನು ದೇಶ ವಿದೇಶದ ಅನೇಕ ಜನರು ಬಂದು ಸಂದರ್ಶಿಸುತ್ತಿದ್ದಾರೆ.

1956ರ ನವೆಂಬರ್ 18 ರಂದು ತಮ್ಮ 65ನೇ ವಯಸ್ಸಿನಲ್ಲಿ ನಿಧನರಾದರು. ಜೋಯಿಸರು ನಿಧನರಾದರೂ ಸಹ ಅವರ ಕೃತಿಗಳ ಮೂಲಕ ಚಿತ್ರದುರ್ಗ ಇತಿಹಾಸಾಭಿಮಾನಿಗಳಲ್ಲಿ ಅಚ್ಚಳಿಯದೇ ಉಳಿದಿದ್ದಾರೆ ಎನ್ನಬಹುದು. ಅವರು ಅಂದು ನಡೆಸಿದ ಸಂಶೋಧನೆಗಳು ಪ್ರಸ್ತುತ ಯುವ ಸಂಶೋಧಕರಿಗೆ ದಾರಿದೀಪವಾಗಿವೆ. ಅಲ್ಲದೇ ಇವರ ಪ್ರತಿಯೊಂದು ಲೇಖನಗಳೂ ಪ್ರೌಢ ಪ್ರಬಂಧ ರಚಿಸಲು ಅರ್ಹವಾಗಿದೆ.

**ಕೊನೆ ಟಿಪ್ಪಣಿಗಳು** :

1. ರಾಜಶೇಖರಪ್ಪ.ಬಿ.–2001.ನಿರಂತರ,ಶ್ರೀಲೋಕಪಾವನಿಪ್ರಕಾಶನ,ಪಾಂಡವಪುರ,ಮಂಡ್ಯಜಿಲ್ಲೆ,ಪು.78
2. ರಾಜಶೇಖರಪ್ಪ.ಬಿ.,ಇತಿಹಾಸ ಸಂಶೋಧಕ, ಹುಲ್ಲೂರು ಶ್ರೀನಿವಾಸ ಜೋಯಿಸರು,ಜೀವನ ದರ್ಶನ.,ಪು.ಸಂ.: 3
3. ಅದೇ ಪುಟ, 3–8
4. ಅದೇ ಪುಟ., 12
5. ಗೋವಿಂದರಾಜಹೆಳಗಳಹಟ್ಟಿ.,–ಚಿತ್ರದುರ್ಗದ ಹುಲ್ಲೂರು ಶ್ರೀನಿವಾಸ ಜೋಯಿಸರು ಜೀವನ ದರ್ಶನ.,ಪು.ಸಂ.3
6. ಅದೇ ಪುಟ. 12
7. ಲಕ್ಷ್ಮಣ್ ತೆಲಗಾವಿ.,ಹುಲ್ಲೂರು ಶ್ರೀನಿವಾಸ ಜೋಯಿಸರು ಮತ್ತು ಚಿತ್ರದುರ್ಗದ ಇತಿಹಾಸ, ಚಂದ್ರವಳ್ಳಿ, ಶ್ರೀನಿವಾಸ್. ಎಂ.ವಿ., ಲಕ್ಷ್ಮಣ್ ತೆಲಗಾವಿ.,ಪು.ಸಂ.: 53
8. ರಾಜಶೇಖರಪ್ಪ ಬಿ.2001.ಪೂರ್ವೋಕ್ತ,.ಪು.ಸಂ.: 79
9. ಅದೇ ಪುಟ – 83